

# ಅಲಿ ತಾಂಡವ ನೃತ್ಯ

ಬಿ–ಟೌನ್ ಅನ್ನು ತಮ್ಮ ಸೂಪರ್‌ಹಿಟ್ ಸಿನಿಮಾಗಳ ಮೂಲಕ ಬೆರಗುಗೊಳಿಸಿದ್ದ ಯುವ ನಿರ್ದೇಶಕ ಅಲಿ ಅಬ್ಬಾಸ್ ಜಾಫರ್. 'ಏಕ್ ಥಾ ಟೈಗರ್', 'ಟೈಗರ್ ಜಿಂದಾ ಹೈ', 'ಭಾರತ್'– ಹೀಗೆ ಇವರು ಆ್ಯಕ್ಷನ್ ಕಟ್ ಹೇಳಿದ ಬಹುತೇಕ ಸಿನಿಮಾಗಳು ಮೊದಲ ವಾರವೇ ನೂರು ಕೋಟಿ ಕ್ಲಬ್ ಸೇರಿಕೊಂಡಿವೆ.

ಅಲಿ ಈಗ ಡಿಜಿಟಲ್ ಫ್ಲಾಟ್‌ಫಾರಂನಲ್ಲಿಯೂ ತಮ್ಮ ಚಳಕ ತೋರಿಸಲು ಮುಂದಾಗಿದ್ದಾರೆ. ಬಾಲಿವುಡ್ ಗಲ್ಲಿ ಸೋರ್ಸ್ ಪ್ರಕಾರ ಪೊಲಿಟಿಕಲ್ ಥ್ರಿಲ್ಲರ್ ಜಾನರ್‌ನ ವೆಬ್ ಸೀರೀಸ್ ಒಂದಕ್ಕೆ ಅವರು ಆ್ಯಕ್ಷನ್ ಕಟ್ ಹೇಳುತ್ತಿದ್ದಾರಂತೆ. ದೆಹಲಿ ರಾಜಕಾರಣವನ್ನೇ ಕೇಂದ್ರವಾಗಿರಿಸಿಕೊಂಡ ಈ ಕಥೆ 2020ರಲ್ಲಿ ವೀಕ್ಷಣೆಗೆ ಲಭ್ಯವಾಗಲಿದೆ ಎನ್ನಲಾಗುತ್ತಿದೆ.

'ತಾಂಡವ್' ಎಂಬ ಹೆಸರಿನ ಈ ಸೀರೀಸ್‌ನ ಎಲ್ಲ ಸಂಚಿಕೆಗಳನ್ನು ಅಲ್ಲದಿದ್ದರೂ, ಬಹುತೇಕ ಸಂಚಿಕೆಗಳನ್ನು ಅಲಿ ನಿರ್ದೇಶಿಸಲಿದ್ದಾರೆ. ಉಳಿದವರು ಅವರ ಮಾರ್ಗದರ್ಶನದಲ್ಲಿ ಸಹಾಯಕರಿಂದ ರೂಪುಗೊಳ್ಳುತ್ತವೆಯಂತೆ. ಪಾತ್ರವರ್ಗ, ತಂತ್ರಜ್ಞರ ತಂಡ ಇನ್ನಷ್ಟೇ ಆಯ್ಕೆಯಾಗಬೇಕಿದೆ.

ಸಿನಿಮಾಗಳ ಮೂಲಕ ಗಲ್ಲಾಪೆಟ್ಟಿಗೆಯನ್ನು ಚಿಂದಿ ಉಡಾಯಿಸಿದ್ದ ಅಲಿ ಅಬ್ಬಾಸ್ ಜಾಫರ್, ವೆಬ್ ಸಿರೀಸ್ ಕ್ಷೇತ್ರದಲ್ಲಿಯೂ ಅದೇ ಹವಾ ಮುಂದುವರಿಸಲಿದ್ದಾರೆ ಎನ್ನುವುದು ಬಿ–ಟೌನ್ ಪಂಡಿತರ ಊಹೆ. ■



# ಇಸಾಬೆಲ್ ಬಾಲಿವುಡ್ ಎಂಟ್ರಿ

ಕತ್ರೀನಾ ಕೈಫ್ ತಂಗಿ ಇಸಾಬೆಲ್ ಕೈಫ್ ಬಾಲಿವುಡ್ ಎಂಟ್ರಿ ಕನ್ಫರ್ಮ್ ಆಗಿದೆ. ಇದುವರೆಗೆ ಆಗೀಗ ಬಿ–ಟೌನ್ ಪಾರ್ಟಿಗಳಲ್ಲಿ, ಪೇಜ್ 3 ಸುದ್ದಿಗಳಲ್ಲಿ ಇಣುಕುತ್ತಿದ್ದ ಇಸಾಬೆಲ್, ತೆರೆಯ ಮೇಲೆ ಎಂಟ್ರಿ ಕೊಡಲು ಸಜ್ಜಾಗಿದ್ದಾರೆ. ಅಂದಹಾಗೆ ಈ ಸುದ್ದಿಯನ್ನು ಬಹಿರಂಗಪಡಿಸಿದವರು ಯಾರು ಅಂತೀರಿ? ಸ್ವತಃ ಸಲ್ಮಾನ್ ಖಾನ್ ತನ್ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಇಸಾಬೆಲ್ ಮತ್ತು ಆಯುಶ್ ಶರ್ಮ 'ಖ್ವಾಥಾ' ಎಂಬ ಸಿನಿಮಾದಲ್ಲಿ ಜೋಡಿಯಾಗಿ ನಟಿಸುತ್ತಿರುವ ಸುದ್ದಿಯನ್ನು ಜಾಹೀರುಮಾಡಿದ್ದಾರೆ.

'ಖ್ವಾಥಾ' ನೈಜ ಘಟನೆಯನ್ನು ಆಧಸಿರಿದ ಥ್ರಿಲ್ಲರ್ ಜಾನರ್ ಸಿನಿಮಾವಂತೆ. ಭಾರತ ಮತ್ತು ಮ್ಯಾನ್ಮಾರ್ ಗಡಿ ನಡುವೆ ಇರುವ ಒಂದು ಹಳ್ಳಿಯ ಹೆಸರನ್ನೇ ಸಿನಿಮಾಗೆ ಇಡಲಾಗಿದೆ. ಗಡಿಯಲ್ಲಿನ ಸೈನಿಕರ ಬದುಕನ್ನು ಬಿಂಬಿಸುವ ಕಥೆ ಇದು ಎಂದು ನಿರ್ದೇಶಕ ಕರಣ್ ಲಲಿತ್ ಬುತಾನಿ ಹೇಳಿದ್ದಾರೆ. ಈ ವರ್ಷ ಸೆಪ್ಟೆಂಬರ್‌ನಲ್ಲಿ 'ಖ್ವಾಥಾ' ಚಿತ್ರೀಕರಣ ಆರಂಭವಾಗಲಿದೆ. 2020ರಲ್ಲಿ ತೆರೆಗೆ ಬರಲಿದೆ.

ಚಿತ್ರದ ನಾಯಕ ಆಯುಶ್ ಶರ್ಮ ಕೂಡ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಈ ವಿಷಯವನ್ನು ಹಂಚಿಕೊಂಡಿದ್ದು, ಇಸಾಬೆಲ್‌ಗೆ ಸ್ವಾಗತ ಕೋರಿದ್ದಾರೆ. 'ಈ ಸುಂದರ ಕಾವ್ಯದ ಶುರುವಾತು ಕೂಡ ಅಷ್ಟೇ ಸುಂದರವಾಗಿ ಶುರುವಾಗಿದೆ. ವೆಲ್‌ಕಮ್ ಇಸಾಬೆಲ್' ಎಂದು ಅವರು ಬರೆದುಕೊಂಡಿದ್ದಾರೆ. 2018ರಲ್ಲಿ ತೆರೆಕಂಡ 'ಲವ್‌ಯಾತ್ರಿ' ಎಂಬ ಸಿನಿಮಾ ಮೂಲಕ ಆಯುಶ್ ಬಾಲಿವುಡ್‌ಗೆ ಪರಿಚಿತರಾದವರು. ಈ ಚಿತ್ರದಲ್ಲಿ ಅವರು ಸೇನಾ ಅಧಿಕಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ತಮ್ಮ ಪಾತ್ರಕ್ಕೆ ಕಠಿಣವಾದ ತಯಾರಿಯನ್ನೂ ಅವರು ನಡೆಸಿದ್ದಾರಂತೆ.

ಇಸಾಬೆಲ್ ಕೂಡ ಹಾಗೆ ಸುಮ್ಮನೆ ಕೈ ಬೀಸಿಕೊಂಡು ನಟನೆಗೆ ಇಳಿದಿಲ್ಲ. ನ್ಯೂಯಾರ್ಕ್‌ನ ಲೀ ಸ್ಟ್ರಾಸ್‌ಬರ್ಗ್ ಥಿಯೇಟರ್ ಆ್ಯಂಡ್ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ನಾಲ್ಕು ವರ್ಷ ನಟನಾ ತರಬೇತಿ ಪಡೆದಿದ್ದಾರೆ. ಹಾಗಾಗಿ ಕ್ಯಾಮೆರಾ ಎದುರಿಗೆ ಲೀಲಾಜಾಲವಾಗಿ ಪಾತ್ರಕ್ಕೆ ಜೀವತುಂಬುವ ವಿಶ್ವಾಸ ಅವರಿಗಿದೆ.

ಆಯುಶ್ ಮತ್ತು ಇಸಾಬೆಲ್ ಇಬ್ಬರೂ ಸದ್ಯಕ್ಕೆ ಸಿನಿಮಾಗೆ ಸಂಬಂಧಿಸಿದ ವರ್ಕ್‌ಶಾಪ್ ಒಂದರಲ್ಲಿ ಬ್ಯುಸಿಯಾಗಿದ್ದಾರೆ. ಸದ್ಯದಲ್ಲಿಯೇ ಅವರು ಚಿತ್ರೀಕರಣ ನಡೆಯುವ ಸ್ಥಳಗಳಿಗೆ ಭೇಟಿ ನೀಡಿ ಇನ್ನಷ್ಟು ಮಾಹಿತಿಯನ್ನು ಪಡೆದುಕೊಳ್ಳುತ್ತಾರಂತೆ.

ಕತ್ರೀನಾ, ತಮ್ಮ ಮೊದಲ ಪ್ರಯತ್ನಗಳಲ್ಲಿ ಸೋಲಿನ ಕಹಿ ಕಂಡೇ ನಂತರ ಗೆಲುವಿನ ಕಿರೀಟ ಮುಡಿಗೇರಿಸಿಕೊಂಡವರು. ಅವರ ತಂಗಿ ಇಸಾಬೆಲ್ ಅನ್ನು ಜನರು ಹೇಗೆ ಸ್ವೀಕರಿಸುತ್ತಾರೋ ಕಾದು ನೋಡಬೇಕಷ್ಟೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65